**ಅ.ದಾ. ನಂಃ 212-2011** **ಪಿ.ಡಬ್ಲ್ಯೂ. 1**

ಸಾಕ್ಷಿದಾರರ ಹೆಸರು ರುಕ್ಮಿಣಿ ಕಲ್ಗುಟ್ಕರ್

ವಾಸ್ತವ್ಯ ಕೋಡಿಭಾಗ, ಕಾರವಾರ

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 06-09-2018.

**(ಸಾಕ್ಷಿದಾರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಎಸ್.ವೈ.ಎಸ್. ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ ಮಾಡಿಕೊಳ್ಳಲಾಯಿತು)**

***ಪಾಟೀ ಸವಾಲುಃ- ಶ್ರೀ ಎ.ಎಮ್.ಎಸ್ ವಕೀಲರಿಂದಃ- 12 ರಿಂದ 15 ರ ಪ್ರತಿವಾದಿಯವರ ಪರ***

ವೆಂಕಟೇಶ್ ಬಾಬು ಭಂಡಾರಿ ಯಾನೆ ಕಲ್ಗುಟ್ಕರ್ ಮತ್ತು ಅವರ ಹೆಂಡತಿ ರತ್ನಾ ವೆಂಕಟೇಶ್ ಭಂಡಾರಿ ಯಾನೆ ಕಲ್ಗುಟ್ಕರ್ ರವರ ಪರಿಚಯ ನನಗೆ ಇತ್ತು. ಅವರಿಬ್ಬರು ಈಗ ತೀರಿಕೊಂಡಿದ್ದಾರೆ. ಅವರಿಗೆ ಗಣಪತಿ , ಗಂಗಾಧರ್ ಮತ್ತು ಬಾಬು ಎಂದು 3 ಜನ ಗಂಡು ಮಕ್ಕಳು. ಹೆಣ್ಣುಮಕ್ಕಳು ಕೃಷ್ಣೆ , ಕಾವೇರಿ , ಯಮುನಾ , ಉಬಗ್ಯ ಎಂದು 4 ಜನ . ಎಲ್ಲಾ ಮಕ್ಕಳು ತೀರಿಕೊಂಡಿದ್ದಾರೆ. ಬಾಬು ಅವರು ಮದುವೆ ಆಗಿಲ್ಲ. ಗಣಪತಿ ಲಕ್ಷ್ಮಣ್ ಮಾಂಜರೇಕರ್ ಇವರು ಯಮುನಾ ಅವರ ಮೊಮ್ಮಗ ಅಂದರೆ ಸರಿ. ಕಾವೇರಿ ಮಗಳು ವಿಶ್ರಾಂತಿ. ಕೃಷ್ಣೆಯ ಮಗ ನಂದ , ಉಬಗ್ಯನ ಮಗಳು ಶಶಿ.

ವೆಂಕಟೇಶ್ ಬಾಬು ಭಂಡಾರಿ ಯಾನೆ ಕಲ್ಗುಟ್ಕರ್ ಇವರು ಸರ್ವೆ ನಂ 4142 ರಿಂದ 4144 ಮತ್ತು ಸರ್ವೆ ನಂ 193/3 , 193/4 ಕೋಡಿಭಾಗ ಇದರ ಗೇಣಿದಾರರು ಎಂದರೆ ಸರಿ. ಸರ್ವೆ ನಂ 4142 ರಿಂದ 4144 ನ್ನು ಸರ್ಕಾರದವರು ಪೋಲಿಸ್ ಇಲಾಖೆಗಾಗಿ ಭೂ ಸ್ವಾಧೀನ ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ 193/3 ಮತ್ತು ಸರ್ವೆ ನಂ 193/4 ವಾದಿ ಮತ್ತು ಪ್ರತಿವಾದಿಗಳ ತಾಬೆಯಲ್ಲಿದೆ ಎಂದರೆ ಸರಿ. ಸರ್ವೆ ನಂ 4142 ರಿಂದ 4144 ಮತ್ತು ಸರ್ವೆ ನಂ 193/3 , 193/4 ಕೋಡಿಭಾಗ ಆಸ್ತಿಗಳು ವಾಟ್ನಿ ಆಗಿಲ್ಲ ಎಂದರೆ ಸರಿ. ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳು ತಂದೆಯೊಂದಿಗೆ ರೈತಾಪಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಅವರಿಗೆಲ್ಲ ಪಾಲಿದೆ ಮತ್ತು ಭೂ ಸ್ವಾಧೀನ ಪ್ರಕ್ರಿಯೆಯಿಂದ ಬಂದ ಪರಿಹಾರ ಧನದಲ್ಲಿ ಅವರಿಗೆ ಪಾಲಿದೆ ಎಂದರೆ ಸರಿ. ಗಣಪತಿ , ವಿಶ್ರಾಂತಿ , ನಂದಾ , ಶಶಿ ಇವರು ಹೆಚ್ಚುವರಿ ಸಿವಿಲ್ ನ್ಯಾಯಲಾಯದಲ್ಲಿ ಅಸಲು ದಾವಾ ಸಂಖ್ಯೆ 42/2014 ನ್ನು ಸಲ್ಲಿಸಿದ್ದರು ಎಂದರೆ ಸರಿ.ಅದೇ ರೀತಿ ಭೂ ಸ್ವಾಧೀನಗೊಂಡ ಆಸ್ತಿಗಳಿಗೆ ಅಮಲ್ಜಾರಿ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃಶ್ರೀ ಎನ್.ಎಮ್.ಕೆ ವಕೀಲರಿಂದಃ ಪ್ರತಿವಾದಿ 1 ರಿಂದ 9 ರ ಪರವಾಗಿಃ**

ಇವತ್ತು ನಾನು 2 ನೇಯ ವಾದಿಯೊಂದಿಗೆ ಬಂದಿದ್ದೇನೆ ಎಂದರೆ ಸರಿ. ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿ ಯಾರು ಎಂದು ನಾನು ಹೇಳಬಹುದು. ಎಷ್ಟು ವಾದಿ ಮತ್ತು ಎಷ್ಟು ಪ್ರತಿವಾದಿಗಳು ಇದ್ದಾರೆ ಎಂದರೆ 4 ವಾದಿಗಳು , ಪ್ರತಿವಾದಿಗಳು ಎಷ್ಟು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂ 193 ಆಗಿದ್ದು ಹಿಸ್ಸಾ ನಂಬರ್ ಹೇಳಲು ಬರುವುದಿಲ್ಲ. ಪ್ರತಿವಾದಿ 1 ರಿಂದ 9 ರವರು ದಾವಾ ಆಸ್ತಿಯಲ್ಲಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿ 1 ರಿಂದ 9 ರವರ 5 ಮನೆಗಳಿವೆ ಎಂದರೆ ಸರಿ. ಶಿವನಾಥ ಕಲ್ಗುಟ್ಕರ್ ಅವರು ಸರ್ವೆ ನಂ 193 ರಲ್ಲಿ ವಾಸಿಸುತ್ತಿದ್ದಾರೆ. ಹಿಸ್ಸಾ ನಂಬರ್ ಹೇಳಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ಕೇವಲ ಪ್ರತಿವಾದಿ 1 ರಿಂದ 9 ರವರು ವಾಸಿಸುತ್ತಿದ್ದು ವಾದಿಗಳು ಮತ್ತು ಉಳಿದ ಪ್ರತಿವಾದಿಗಳು ವಾಸಿಸುತ್ತಿಲ್ಲ ಎಂದರೆ ಸರಿಯಲ್ಲ. ವೆಂಕಟೇಶ್ ಕಲ್ಗುಟ್ಕರ್ ಅವರು ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನನ್ನ ಅಫಿಡವಿಟ್‌ನಲ್ಲಿ 72 ವರ್ಷ ಎಂದು ನಮೂದಿಸಿದ್ದು ನಾನು 1946 ರಲ್ಲಿ ಹುಟ್ಟಿದ್ದೆ ಎಂದರೆ ನಾನು ಮದುವೆಯಾದ ಆಧಾರದ ಮೇಲೆ ಆ ರೀತಿ ಬರೆದಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಮದುವೆ 1960 ರಲ್ಲಿ ಆಯಿತು. ಮದುವೆಯಾದ ನಂತರ ನಾನು ನನ್ನ ಗಂಡನ ಜೊತೆಯಲ್ಲಿ ದಾಂಡೇಲಿಯಲ್ಲಿ ವಾಸಿಸುತ್ತಿದ್ದೆ. ಅಲ್ಲಿ ನನ್ನ ಗಂಡ ವೇಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ನಿವೃತ್ತರಾಗಿ 24 ವರ್ಷಗಳಾಯಿತು. ಕೋಡಿಭಾಗ ಕಾರವಾರಕ್ಕೆ ಬಂದು 24 ವರ್ಷಗಳಾಯಿತು. 1994 ರಲ್ಲಿ ಕೋಡಿಭಾಗಕ್ಕೆ ಬಂದೆ ಎಂದರೆ ಸರಿ. ಗಂಗಾಧರ್ ಹಾಗೂ ಗಣಪತಿ ಯಾವ ವರ್ಷದಲ್ಲಿ ತೀರಿಕೊಂಡರು ಎಂದರೆ ಗಂಗಾದರ್ ಅವರು ತೀರಿಕೊಂಡು 22 ವರ್ಷಗಳಾಗಿವೆ. ಗಣಪತಿ ನಂತರ ತೀರಿಕೊಂಡಿದ್ದಾರೆ ಆದರೆ ನಿಖರವಾಗಿ ಹೇಳಲು ಬರುವುದಿಲ್ಲ. ಬಾಬು 1960 ರಲ್ಲಿ ತೀರಿಕೊಂಡಿದ್ದಾರೆ. ನಾನು ದಾವಾ ಆಸ್ತಿಗೆ ಸಂಬಂಧ ಪಟ್ಟ ಕಂದಾಯ ದಾಖಲಾತಿಗಳನ್ನು ನೋಡಿಲ್ಲ ಎಂದರೆ ಸರಿ. ಭೂ ನ್ಯಾಯ ಮಂಡಳಿಯ ಆದೇಶದ ಬಗ್ಗೆ ನನಗೆ ಮಾಹಿತಿ ಇಲ್ಲ. ಬಾಬು ಅವರು ತಮ್ಮ ಜೀವಿತಾವಧಿಯಲ್ಲಿ ಸಾಗುವಳಿ ಮಾಡುವುದನ್ನು ಬಿಟ್ಟು ಬಿಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾಬು ಅವರು ಬಿಟ್ಟ ನಂತರ ಸರ್ವೆ ನಂ 193/3 ರಲ್ಲಿ ಗಣಪತಿ ಕಲ್ಗುಟ್ಕರ್ ಅವರು ವೈಯಕ್ತಿಕ ನಾತೆಯಿಂದ ಸಾದಾ ಕೂಳ್ ಅಂತಾ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಗಂಗಾಧರ್ ಅವರು ಸಹ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಗಣಪತಿ ಅವರು 1955 ರಲ್ಲಿ ವೈಯಕ್ತಿಕ ನಾತೆಯಿಂದ ಸಾಗುವಳಿ ಮಾಡಲು ಪ್ರಾರಂಭಿಸಿದ ನಂತರ ಗಂಗಾಧರ್ ಅವರು ಗಣಪತಿ ಅವರೊಂದಿಗೆ ಸರ್ವೆ ನಂ 193/3 ರಲ್ಲಿ ಎಂದಿಗೂ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿ ಅವರು ಗಂಗಾಧರ್ ಅವರ ಅರ್ಜಿಯನ್ನು ವಜಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ 5/1, 5/2 , 6/1, 6/2 , 7/1, 7/2, 8/1, 8/2 , 9/1, 9/2 ಈ ಆಸ್ತಿಗಳು ಸಹ ವೆಂಕಟೇಶ್ ಕಲ್ಗುಟ್ಕರ್ ಅವರಿಗೆ ಸಂಬಂಧಿಸಿದ್ದು ಎಂದರೆ ಅವರ ಅಜ್ಜಿಯಿಂದ ಬಂದ ಆಸ್ತಿ ಎಂದು ಸಾಕ್ಷಿಯು ನುಡಿಯುತ್ತಾರೆ. ಸದ್ರಿ ಆಸ್ತಿಗಳಲ್ಲಿ ಸಹ ವಾಟ್ನೆ ಆಗಿಲ್ಲ. ದಾವೆಯಲ್ಲಿ ಸದ್ರಿ ಆಸ್ತಿಗಳನ್ನು ಸೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆ 42/2014 , ಮತ್ತು ಅಮಲ್ಜಾರಿ ನಂ 290/2009 ರಲ್ಲಿ ಪಕ್ಷಗಾರರ ಬಗ್ಗೆ ಮಾಹಿತಿ ನನಗೆ ಇಲ್ಲ. ಅದರಲ್ಲಿ ಯಾವ ಆಸ್ತಿಗಳಿವೆ ಎಂದರೆ ಕೋಡಿಭಾಗಕ್ಕೆ ಸಂಬಂಧಪಟ್ಟ ಆಸ್ತಿಗಳಿವೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ದಾವೆಯ ಆಸ್ತಿಗಳು ಮೇಲೆ ಹೇಳಿದ ದಾವೆಗಳಲ್ಲಿ ದಾವಾ ಆಸ್ತಿಗಳಾಗಿವೆಯೇ ಎಂದರೆ ಆಗಿವೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸಹ 2 ನೇ ವಾದಿಯನ್ನು ಸಮರ್ಥಿಸುವ ಸಲುವಾಗಿ ಆತನು ಹೇಳಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೇಣಿ ಆಸ್ತಿಗೆ ಎಷ್ಟು ಗೇಣಿ ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿ 1 ರಿಂದ 9 ರವರ ನಡುವೆ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)***

***ಓ. ಹೇ. ಕೇ. ಸರಿ ಇದೆ.***

***ಹೆ. ಸಿವಿಲ್ ನ್ಯಾಯಾಧೀಶರು, ಕಾರವಾರ.***